**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2014**
**S.S.L.C. EXAMINATION, MARCH / APRIL, 2014**

# ಮಾದರಿ ಉತ್ತರಗಳು
# MODEL ANSWERS

ದಿನಾಂಕ : 04. 04. 2014 — ಸಂಕೇತ ಸಂಖ್ಯೆ : **62-K**

Date : 04. 04. 2014 — CODE NO. : **62-K**

## ವಿಷಯ : ತೃತೀಯ ಭಾಷೆ — ಕನ್ನಡ
## Subject : THIRD LANGUAGE — KANNADA

[ ಪರಮಾವಧಿ ಅಂಕಗಳು : 100
[ Max. Marks : 100

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| | | ಬಹು–ಆಯ್ಕೆಯ ಉತ್ತರಗಳು : (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ) | 15 × 1 = 15 |
| 1. | (ಎ) | ಅರ್ಚನ | |
| 2. | (ಬಿ) | ಸರ್ವನಾಮ | |
| 3. | (ಸಿ) | ಧಾತು | |
| 4. | (ಡಿ) | ಅವರು | |
| 5. | (ಬಿ) | ಇಂದ | |
| 6. | (ಸಿ) | ಮರವನ್ನು | |
| 7. | (ಸಿ) | ಅವಮರ್ಯಾದೆ | |
| 8. | (ಬಿ) | ದರ್ಶನ | |
| 9. | (ಡಿ) | ಜನುಮ | |
| 10. | (ಎ) | ತರುಣಿ | |
| 11. | (ಎ) | ಉಪಮಾ | |
| 12. | (ಎ) | ನಿಂತಿವೆ | |
| 13. | (ಡಿ) | ಪೂರ್ವ | |
| 14. | (ಸಿ) | – | |
| 15. | (ಎ) | ಪೂರ್ಣವಿರಾಮ | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಹೊಂದಿಸಿ ಬರೆಯುವುದು. (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ) | 5 × 1 = 5 |
| | i) ಊ) ಥಳಥಳ | |
| | ii) ಋ) ಕ್ಷಣಕ್ಷಣ | |
| | iii) ಉ) ದೀನದಲಿತ | |
| | iv) ಇ) ಬೆಹನ್ ಜೀ | |
| | v) ಅ) ಬೀಳದು | |
| | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬುವುದು. (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ) | 5 × 1 = 5 |
| 17. | ಮಣ್ಣಾಗದು | |
| 18. | ಬಗ್ಗೀತೆ | |
| 19. | ಪ್ರಕೃತಿ | |
| 20. | ಋತು ವಿಲಾಸ | |
| 21. | ಬಾ ಚೇತನವೇ ಬಾ | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ. (ಪೂರ್ಣ ವಾಕ್ಯದಲ್ಲಿ ಉತ್ತರವನ್ನು ಬರೆದಿದ್ದರೆ ಪೂರ್ಣ ಅಂಕವನ್ನು ನೀಡುವುದು) | 8 × 1 = 8 |
| 22. | ಮೋಡಗಳನ್ನೆಲ್ಲ ಕರಗಿಸಿ ಕತ್ತಲೆಯನ್ನೆಲ್ಲ ಸುಟ್ಟು ಬೂದಿ ಮಾಡಿಬಿಟ್ಟ. | |
| 23. | ತಲೆಗೆ ಕೇಸರಿವರ್ಣದ ಗಾಂಧೀ ಟೋಪಿ, ಹಸಿರು ಬಣ್ಣದ ಜುಬ್ಬ, ಬಿಳಿಯ ಪಂಚೆಯಿಂದಾಗಿ ರಾಯರು ಕಾಳಿಯಮ್ಮನ ಪೂಜಾರಿಯಂತೆ ಕಾಣುತ್ತಿದ್ದರು. | |
| 24. | ಲಂಡನ್ನಿನ ಗಾಜಿನರಮನೆಯ ಪುನರುತ್ಥಾನ. | |
| 25. | ನಡುಮನೆ ಶಾಸ್ತ್ರಿಗಳಿಗೆ ಅಧ್ಯಯನ – ಅಧ್ಯಾಪನ – ಶಯನ – ವಿಶ್ರಾಂತಿಗೆ ಆಶ್ರಯ ತಾಣವಾಗಿತ್ತು. | |
| 26. | ಅಧಿಕಾರ ಮತ್ತು ಸಾಮರ್ಥ್ಯಕ್ಕೆ ಅಂಜುತ್ತಾರೆಂದು ಇಟಗಿಯವರು ತಿಳಿಸಿದ್ದಾರೆ. | |
| 27. | ವಿಶ್ವಕರ್ಮನು ಹಡಗನ್ನು ಸೃಷ್ಟಿಸಿ ಸಪ್ತಸಾಗರದ ಮೇಲೆ ತೇಲಿಬಿಟ್ಟನು. | |
| 28. | ಭರತೇಶನು ಸಿಂಹಾಸನದ ಮೇಲೆ ಪ್ರತಿ ಸೂರ್ಯನಂತೆ ಶೋಭಿಸುತ್ತಿದ್ದನು. | |
| 29. | ತೀ.ನಂ. ಶ್ರೀಕಂಠಯ್ಯನವರು ಗಾಂಧೀಜಿಯವರನ್ನು ಸರ್ವೋದಯ ಸೂತ್ರದಾರ ಎಂದು ಕರೆದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯುವುದು. | 15 × 2 = 30 |
| 30. | ನೀನೀಗ ಮಹಾರಾಣಿ ಹತ್ತಿರ ಹೋಗಿ ನನ್ನ ಗಂಡ ಹೊರಟು ಹೋದ ಅಂತ ಹೊಡ್ಕೊ, ನಾನು ಮಹಾರಾಜರ ಹತ್ತಿರ ಹೋಗಿ ನನ್ನ ಹೆಂಡತಿ ಹೊರಟು ಹೋದಳು ಅಂತ ಅಳ್ತೀನಿ ಎಂಬ ಉಪಾಯವನ್ನು ಸೂಚಿಸಿದನು. | |
| 31. | ಗೌರಿ ಮಹಾರಾಣಿಯ ಬಳಿ ಹೋಗಿ, ನನ್ನೊಬ್ಬಳನ್ನೇ ಬಿಟ್ಟು ಹೋದಿರಾ ? ಎಷ್ಟು ಚೆನ್ನಾಗಿ ಹೊಗಳ್ತಾ ಇದ್ದರೂ – ನಾನು ಅಡಿಗೆ ಮಾಡೋದನ್ನ, ಎಷ್ಟು ಚೆನ್ನಾಗಿ ತಿನ್ನುತ್ತಿದ್ರು. ಹೂಂ ... ಇನ್ನೆಲ್ಲಿ ಅಡಿಗೆ ? ಇನ್ನೆಲ್ಲಿ ತಿನ್ನೋದು ? ನನ್ನನ್ನು ಬಿಟ್ಟು ಹೊರಟು ಹೋದರು ಎಂದು ಹೇಳಿದಳು. | |
| 32. | ಕೇದಾರ ಪರ್ವತವನ್ನು ಹತ್ತುವಾಗ ಕುದುರೆಯವನು ಲೇಖಕಿಯರಿಗೆ ಮೇಲಕ್ಕೆ ಹತ್ತುವಾಗ ಮುಂದೆ ಬಾಗಬೇಕೆಂದೂ, ಕೆಳಗೆ ಇಳಿಯುವಾಗ ಹಿಂದಕ್ಕೆ ಬಾಗಬೇಕೆಂದೂ, ದೇಹ ಬಿಟ್ಟು ಕೂರಬೇಕೆಂದೂ ಸಲಹೆ ಕೊಟ್ಟನು. | |
| 33. | ಪಂಚ ಪರ್ವತಗಳು ಕೇದಾರ ಪರ್ವತ ಶ್ರೇಣಿಯಲ್ಲಿವೆ. ಅವು ಯಾವುವು ಎಂದರೆ ರುದ್ರಹಿಮಾಲಯ, ಬ್ರಹ್ಮಪುರಿ, ವಿಷ್ಣುಪುರಿ ಉದ್ಗರಿಕಾರಕ, ಸ್ವರ್ಗಾರೋಹಿಣಿ. | |
| 34. | ಓದಿನಲ್ಲಿ ಆಸಕ್ತಿಯಿದ್ದ ಕಾರಂತರಿಗೆ ಪುಸ್ತಕ ಕೊಳ್ಳಲು ಹಣವಿಲ್ಲದಿದ್ದಾಗ, ಅವರು ಪಾಠ ಹೇಳುತ್ತಿದ್ದ ಗುರುಗಳ ಮನೆಯಿಂದ ಹಣ ಕದಿಯುತ್ತಿದ್ದರು. ಕಳ್ಳತನ ಬಯಲಾದಾಗ ಅವರು ಮನೆ ಬಿಟ್ಟು ಹೋಗಬೇಕಾಯಿತು. | |
| 35. | ಲಕ್ಷ್ಮಮ್ಮನವರು ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತಕೋಲ, ರಥೋತ್ಸವ, ಪಾಡ್ದನಗಳು, ಪಾತ್ರಿಯ ದರ್ಶನ ಇವು ಕಾರಂತರಿಗೆ ಬಾಲ್ಯದಲ್ಲಿ ಸಿಕ್ಕ ಕಲಾಶ್ರೀಮಂತಿಕೆ. | |
| 36. | ಒಂದೆಡೆ ಜನತೆಯನ್ನು ಸ್ವಾತಂತ್ರ್ಯ ಸ್ವರಾಜ್ಯಕ್ಕೆ ಪ್ರೇರಿಸುವುದು. ಮತ್ತೊಂದೆಡೆ ಸ್ವರಾಜ್ಯದ ಎರಡನೆ ಅಂಗವಾದ ಸ್ವಾವಲಂಬನೆಗಾಗಿ ಹಳ್ಳಿಗರನ್ನು ಸಿದ್ಧಗೊಳಿಸುವುದು. ಇವು ಅವರ ಎರಡು ಮುಖ್ಯ ಕಾರ್ಯಕ್ರಮಗಳಾಗಿದ್ದವು. | |
| 37. | ಶಾಸ್ತ್ರೀಯ ಸೊಸೆಯನ್ನು ಕಂಡು ನೆರೆಮನೆಯ ಗುಬ್ಬೆಯೊಬ್ಬಳು ''ಅವಳಿಗೆ ಹುಚ್ಚ ಗಂಡ ಬೇಕಾಗಿದ್ದನೆಲ್ಲಿ? ಎಂದು ಅವಳ ಕಿವಿಗೆ ಬೀಳುವಂತೆ ಆಡಿದ್ದಳು. ವಾರಿಸ ಅತ್ತೆಯೊಬ್ಬಳು ''ಹುಡುಗನ ಮುಖ ಅತ್ತೆಯ ಮನೆಯವರಾರಂತೆಯೂ ಇಲ್ಲ'' ? ಎಂದು ಪ್ರಕಟನೆ ಹೊರಡಿಸಿದ್ದಳು. ಹಾಳುಗುಡಿಯ ಒಕ್ಕಣ್ಣ ಪೂಜಾರಿಯೊಬ್ಬ ಈಕೆಯನ್ನು ಕಂಡಾಗ್ಗೆ ಪಿಸಿಪಿಸಿ ನಕ್ಕಿದ್ದ. ಯಾರ್ಯಾರೋ ಏನೇನೊ ಅಂದಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಪಂಪನ ಸಾಹಿತ್ಯ ಕೃತಿಗಳನ್ನು ಜೋಡಿ ಶಿಖರಕ್ಕೆ, ರನ್ನನ ಮೇರು ಕೃತಿ ವಿಕ್ರಮಾರ್ಜುನ ವಿಜಯವನ್ನು ಧವಳದಗಿರಿಗೆ, ವಚನಕಾರರ ವಚನ ಸಾಹಿತ್ಯವನ್ನು ವಿಸ್ತಾರದ ಬಯಲಿಗೆ, ಹರಿಹರನ ರಗಳೆಯನ್ನು ಹರಿಯುವ ಝರಿಗೆ, ಕುಮಾರವ್ಯಾಸನ ಕೃತಿಯನ್ನು ರಸಧಾರೆಗೆ, ರತ್ನಾಕರನ ಭರತ್ತೇಶ ವೈಭವ ಕೃತಿಯನ್ನು ವಿಶಾಲವಾಗಿ ಹರಡಿಕೊಂಡ ಕೆಂದಾವರೆ ಕೆರೆಗೆ ಹೀಗೆ ಕವಿ ಪ್ರಾಚೀನ ಕವಿಗಳನ್ನು ಪ್ರಕೃತಿಯೊಂದಿಗೆ ಹೋಲಿಸಿ ಪರಿಚಯಿಸಿದ್ದಾರೆ. | |
| 39. | ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಭಾರತೀಯರು ಹೇಡಿಗಳಂತೆ ನಿಕೃಷ್ಟರಾಗಿ ಜೀವಿಸುತ್ತಿದ್ದರು. ಇಂತಹ ಜನರಲ್ಲಿ ವಜ್ರ ಹೃದಯವನ್ನು ಬಿತ್ತಿದರು. ಈ ಹಿಂದೆ ಹೇಡಿಗಳಂತಿದ್ದ ಜನರು ವೀರರಾಗಿ ದೇಶ ರಕ್ಷಣೆಗೆ ನಿಲ್ಲುವಂತೆ ಮಾಡಿದವರಾದ ಕಾರಣ ಗಾಂಧೀಜಿಯವರನ್ನು ಹಿರಿಯ ತಂದೆ ಎಂದು ಕರೆದಿದ್ದಾರೆ. | |
| 40. | ಭಗವಂತನಿಂದ ಜನ್ಮಪಡೆದ ಈ ಮಾನವ. ಭಗವಂತನನ್ನು ಅರಿಯದೆ ತನ್ನನ್ನು ತಾನು ತಿಳಿಯದೆ, ಊರೂರನ್ನು ಸುತ್ತುತ್ತ ಮಾರುದ್ದ ಮಾತನಾಡುವುದನ್ನು ಕಂಡು ಶಾರದಾ ಸಖ ಈಶಾ ಬೆರಗಾಗಿದ್ದಾನೆ. | |
| 41. | ಮಾನವನ ದೇಹವೆಂಬ ಬಂಡಿಯನ್ನು ನಡೆಸುವವರು ಐವರು. (ಪಂಚೇಂದ್ರಿಯಗಳು). ಇವರೆಲ್ಲರು ತಾಮೇಲು ನಾಮೇಲು ಎಂದು ಹೊಡೆದಾಡುತ್ತಿರುವ ಸಂದರ್ಭದಲ್ಲಿ ಎಲ್ಲಕಿಂತ ಮಿಗಿಲಾದ ಭಗವಂತ. ಈ ಮಾನವನ ಆಸೆಗಳನ್ನು ಅರಿತು ಅವರನ್ನು ಸನ್ಮಾರ್ಗದಲ್ಲಿ ನಡೆಸದಿದ್ದರೆ ಆತನ ಜನ್ಮ ಅಚ್ಚು ಮುರಿದ ಹಾಳು ಬಂಡಿಯಂತಾಗುತ್ತದೆ ಎಂದು ಶಾಂತಾದೇವಿ. ಕೆ. ಸಾಬಾದಿಯವರು ಹೇಳಿದ್ದಾರೆ. | |
| 42. | ಹಿರಿಯರು ನಾ. ಮೊಗಸಾಲೆಯವರನ್ನು ಸತ್ಕರಿಸಿ, ಅವರ ಬಳಿ ಕುಳಿತು ನನಗೂ ನಿಮ್ಮಂತಹ ಮಗನಿದ್ದ ಅವನೂ ಕವಿ. ಆದರೆ ಹದಿನೈದು ವರ್ಷಗಳ ಹಿಂದೆ ತಿರುಪತಿಗೆ ಬಂದು ಹಿಂದಿರುಗಿ ಹೋಗುತ್ತಿದ್ದಾಗ ಅಪಘಾತದಲ್ಲಿ ಮಡಿದ. ಆತನನ್ನು ನೆನೆಸಿಕೊಳ್ಳಲು ಪ್ರತಿ ವರ್ಷ ಈ ದಿನ ಇಲ್ಲಿಗೆ ಬರುತ್ತೇನೆ. ಇಂದಿನ ದಿನ ತಮ್ಮನ್ನು ಕಂಡಾಗ, ನನ್ನ ಮಗನಿಗೂ ತಮಗೂ ಸ್ವಲ್ಪವೂ ವ್ಯತ್ಯಾಸವಿಲ್ಲ. ತಾವು ಯಾರೇ ಆಗಿರಲಿ ತಮ್ಮನ್ನು ಅಪ್ಪಿಕೊಳ್ಳಬೇಕೆನಿಸುತ್ತಿದೆ. ಆದ್ದರಿಂದ ಇಲ್ಲ ಅನಬೇಡಿ ಎಂದು ಹೇಳಿದರು. | |
| 43. | ಪ್ರಪಂಚದ ಜನರಿಗೆ ಹಸಿವು, ಬಾಯಾರಿಕೆ, ಮಲಮೂತ್ರ ವಿಸರ್ಜನೆಗಳಿದ್ದರೆ, ಇವು ಯಾವವು ಭರತೇಶನನ್ನು ಕಾಡುವುದಿಲ್ಲ. ಹೀಗೆ ಭರತೇಶ ಮಾನವರಿಗಿಂತ ಭಿನ್ನನಾಗಿದ್ದಾನೆ. | |
| 44. | ದೇವರ ದರ್ಶನ ಮುಗಿಸಿಕೊಂಡು ಹೊರಬಂದಾಗ ಹಿರಿಯರು ಮೊಗಸಾಲೆಯವರೊಂದಿಗೆ ಮಾತಿಗೆ ಆರಂಭಿಸಿ ತಾವು ಯಾರೇ ಆಗಿರಲಿ ನನ್ನೊಂದಿಗೆ ಬರಬೇಕೆಂದು ಹೇಳಿ ತಾವು ಇಳಿದು ಕೊಂಡಿದ್ದ ಕೋಣೆಯನ್ನೇ ಮನೆ ಎಂದು ತಿಳಿದು ಆಹ್ವಾನಿಸಿ, ಹಣ್ಣು ಹಂಪಲುಗಳನ್ನು ನೀಡಿ ಸತ್ಕರಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಂದರ್ಭ ಸಹಿತ ವಿವರಣೆ : | 4 × 3 = 12 |
| | ಕೃತಿ–ಕರ್ತೃ | 1 ಅಂಕ |
| | ಯಾರು ಯಾರಿಗೆ | 1 ಅಂಕ |
| | ಸಂದರ್ಭ ವಿವರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | ಪಾಠ : ಆ ದೇಶವೇ ಅವರ ತಾಯಿ<br>ಲೇಖಕರು : ಹೊಯಿಸಳ / ಲಕ್ಷ್ಮಣರಾಯರು<br>ಸಂದರ್ಭ : ಈ ಮಾತನ್ನು ಬೆಂಕಿ ಭರತಕುಮಾರನಿಗೆ ಹೇಳಿದ ಮಾತು. ಭರತ ತನ್ನ ತಾಯಿಯನ್ನು ಕಾಣಲು ಕೂಗಿ ಕೊಳ್ಳುತ್ತಿರುವ ಸಂದರ್ಭದಲ್ಲಿ ಭರತ ಕುಮಾರನ ಕಷ್ಟವನ್ನು ಕಂಡ ಬೆಂಕಿ ಉರಿಯುವುದನ್ನು ಬಿಟ್ಟು ಆತನನ್ನು ಸಮಾಧಾನ ಮಾಡಲು. ನನ್ನ ಹೊಗೆಯನ್ನು ಕಳುಹಿಸಿ ಹುಡುಕಿಸುತ್ತೇನೆಂದು ಆತನದಲ್ಲಿ ಧೈರ್ಯ ತುಂಬಿತು. ಈ ಸಂದರ್ಭದಲ್ಲಿ ಬೆಂಕಿ ಹೇಳಿದ ಮಾತು. | |
| 46. | ಪಾಠ : ಉದ್ಯಾನ ರಾಣಿ – ಲಾಲ್‌ಬಾಗ್<br>ಲೇಖಕರು : ದೇ. ಜವರೇಗೌಡ / ದೇಜಗೌ<br>ಸಂದರ್ಭ : ಈ ಮಾತನ್ನು ದೇಜಗೌ ರವರು ಓದುಗರಿಗೆ ಹೇಳಿದ ಮಾತು. ಎಂ.ಎಚ್. ಮರಿಗೌಡರು ನಾಲ್ಕು ಪ್ರಮುಖ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸಿ, ರೈತರ ಏಳಿಗೆಗೆ ಸತತವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಯಶ್ವಸಿಯಾದ ಸಂದರ್ಭದಲ್ಲಿ ಲೇಖಕರು ಹೇಳಿದ ಮಾತು. | |
| 47. | ಪದ್ಯ : ಯುಗಾದಿ ಬರುವುದು ನಮಗೆಂದೆ ?<br>ಕವಿ : ಹೊರೆಯಾಲ ದೊರೆ ಸ್ವಾಮಿ<br>ಸಂದರ್ಭ : ಯುಗಾದಿ ಹಬ್ಬ ವರ್ಷ ವರ್ಷ ಬಂದು ಹೋದರು ಈ ಹಬ್ಬ ಬಡವರ ಜೀವನದಲ್ಲಿ ಯಾವುದೇ ಪರಿವರ್ತನೆಯನ್ನು ತರಲಿಲ್ಲ. ಈ ಬಡಜನರ ಜೀವನದ ಕನಸುಗಳನ್ನು ನನಸಾಗಿಸುವ ಯುಗಾದಿ ಯಾವಾಗ ಬರುತ್ತದೆ ಎಂದು ಕವಿ ಗೆಳತಿಯನ್ನು ಕುರಿತು ಕೇಳುವ ಸಂದರ್ಭದಲ್ಲಿ ಬಂದ ಮಾತು. | |
| 48. | ಪದ್ಯ : ಹಡಗದ ಚಂದ<br>ಕರ್ತೃ : ವಿ.ಕೃ. ಗೋಕಾಕ / ವಿನಾಯಕ<br>ಸಂದರ್ಭ : ಈ ಮಾತನ್ನು ಕವಿ ಓದುಗರಿಗೆ ಹೇಳುವ ಮಾತು. ಹಡಗು ಕೇವಲ ಹಡಗಲ್ಲ ಅದೊಂದು ದೊಡ್ಡ ಪ್ರದೇಶ, ಇದು ಕಬ್ಬಿಣದ ಕಟ್ಟಡವಲ್ಲ ತನ್ನ ಗುರಿಯನ್ನು ತಲುಪುವ ಪಟ್ಟಣ. ಈ ಪಟ್ಟಣದಲ್ಲಿ ನಾನಾ ದೇಶದ ಜನರನ್ನು ಭಾಷೆಗಳನ್ನು, ಸಂಸ್ಕೃತಿಯನ್ನು ಕಾಣುವುದರಿಂದ ಕವಿ ಇದನ್ನು ಬ್ರಹ್ಮಾಂಡ, ನೂರು ಭಾಷೆಗಳ ನವಖಂಡ ಎಂದು ಕರೆದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 49. | ಪದ್ಯ ಭಾಗ ಪೂರ್ಣಗೊಳಿಸಿ : (ಕಾಗುಣಿತ ದೋಷವಲ್ಲದ ಮೂರು ಪಾದಗಳಿಗೆ ಮೂರು ಅಂಕ ನೀಡುವುದು)<br><br>ಕಾಲನ ದೂತರು ಕಾಲ್ಪಿಡಿದೆಳೆದಾಗ<br>ತಾಳು ತಾಳೆಂದರೆ ತಾಳುವರೆ<br>ದಾಳಿ ಬಾರದ ಮುನ್ನ ಧರ್ಮವ ಗಳಿಸಿರೋ<br>ಸುಳ್ಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ ॥<br><br>ಅಥವಾ<br><br>ಸುಳಿ ಮಿಂಚಿನ ಸೆಳೆ ಮುಂಗಾರಿನ ಮಳೆ<br>ಕುಮಾರವ್ಯಾಸನ ರಸಧಾರೆ<br>ಎದೆಯಗಲಕು ಕೆಂದಾವರೆ ಅರಳಿದ<br>ಕವಿವರ ರತ್ನಾಕರನ ಕೆರೆ. | 1 × 3 = 3 |
| 50. ಮತ್ತು 51. | ಐದಾರು ವಾಕ್ಯಗಳಿಗೆ ಮೀರದಂತೆ ಉತ್ತರಗಳು : (ಎರಡಕ್ಕೆ ಮಾತ್ರ)<br>ವಿಷಯಕ್ಕೆ<br>ಭಾಷಾ ಶೈಲಿಗೆ<br><br>ಒಟ್ಟು | 2 × 4 = 8<br>3 ಅಂಕಗಳು<br>1 ಅಂಕ<br><br>4 ಅಂಕಗಳು |
| | — ಹದಿಮೂರು ದಿನಗಳ ಕಾಲ ಪೂರ್ಣಿಮ ಇರುಳು ಸೇವೆಯನ್ನು ಮಾಡಿದಳು. ಹದಿನಾಲ್ಕನೇ ದಿನ ಎಲೆ ಸರಿಯಾಗಿ ಎತ್ತಿರಲಿಲ್ಲವೋ, ಬೆಲ್ಲ ಜಾಸ್ತಿಯಾಯಿತೆಂದು ಸಜ್ಜಿಗೆ ಉಂಡೆಗಳು ನೆಲದ ಮೇಲೆ ಬಿದ್ದಿದ್ದವು. ಧೃತಿಗೆಡದೆ ಎಂದಿನಂತೆ ಉರುಳು ಸೇವೆಯನ್ನು ಮಾಡಿ ಎದ್ದು ನೋಡಿದಾಗ ಉಂಡೆಗಳು ತೆಳ್ಳಗೆ ರೊಟ್ಟಿಯ ತರಹ ನೆಲಕ್ಕೆ ಕಚ್ಚಿದ್ದನ್ನು ಕಂಡು ಮನೆಗೆ ಹೋಗಿ ಒಂದು ಮರದ ತುಂಡನ್ನು ತೆಗೆದುಕೊಂಡು. ಚಾಕುವಿನಿಂದ ಎರಡೂ ಕಡೆಯೂ ಕೆತ್ತಿ ಕೈಯಲ್ಲಿ ಹಿಡಿಯುವಂತೆ ಮಾಡಿ ಮಧ್ಯದ ಭಾಗವನ್ನು ಗುಂಡಗೆ ನುಣುಪಾಗಿರುವಂತೆ ಉಪ್ಪುಕಾಗದದಿಂದ ಉಜ್ಜಿ ನುಣುಪುಗೊಳಿಸಿ ನಂತರ ಮಣೆಯ ಮೇಲೆ ಹಿಟ್ಟಿನ ಮುದ್ದೆಯಿಟ್ಟು, ಅದನ್ನು ಒತ್ತಿ ಉರುಳಿಸಿದಾಗ ಸುಲಭವಾಗಿ ತೆಳ್ಳನೆಯ ರೊಟ್ಟಿಯಾಯಿತು. ಹೀಗೆ ಪೂರ್ಣಿಮ ಲಟ್ಟಣಿಗೆಯ ಜನ್ಮರಹಸ್ಯವನ್ನು ಕಂಡುಕೊಂಡಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಕಾಡು ಒಂದು ಅತ್ಯುತ್ತಮ ನೈಸರ್ಗಿಕ ಬಹುಹಂತಗಳ ತಡೆ. ಕಾಡೇ ನದಿಗಳ ತಾಯಿ. ಇಂತಹ ಪ್ರಾಕೃತಿಕ ಮತ್ತು ಪೂರ್ವಜರು ಮಾಡಿಟ್ಟ ಕೆರೆ, ಮದಕ, ಒಡ್ಡುಗಳಂತಹ ತಡೆಗಳನ್ನು ನಾವಿಂದು ನಾಶಗೊಳಿಸಿದ ಕಾರಣ ಮಳೆಗಾಲದಲ್ಲಿ ಭೂಮಿಯ ಒಡಲು ತುಂಬುವುದಿಲ್ಲ. ಬಿದ್ದ ಮಳೆನೀರು ಅತ್ಯಮೂಲ್ಯವಾದ ಮೇಲ್ಮಣ್ಣನ್ನು ಕೊಚ್ಚಿಕೊಂಡು ಹೋಗಿ ನಮ್ಮ ಜಲಮೂಲಗಳಿಗೆ ತುಂಬುತ್ತಿದೆ. ಅಲ್ಲಿ ಅದು ಹೂಳಾಗಿ ತಳದಲ್ಲಿ ಉಳಿದಾಗ ಬಿದ್ದ ಮಳೆನೀರಿನ ಶೇಖರಣೆ ಮತ್ತು ಭೂಗರ್ಭಕ್ಕೆ ಇಳಿಯುವ ಕಾರ್ಯಕ್ಕೆ ಅಂತರ್ಜಲ ಮರುಪೂರಣ ಕುಂಡುಬರುತ್ತದೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ಜಲಮಟ್ಟ ಕುಸಿಯುತ್ತಿದೆ. | |
| | — ಬೆಳಕಾದಾಗ ಭರತಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರ ದನಿಯಲ್ಲಿ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯ ಛಾಯೆಯೇ ಕಾಣುತ್ತಿತ್ತು. ಹೀಗೆ ಭರತಕುಮಾರ ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ತನ್ನ ತಾಯಿಯನ್ನು ಕಂಡುಕೊಂಡ. | |
| 52. | ಯಾವುದಾದರೂ ಒಂದಕ್ಕೆ ಐದಾರು ವಾಕ್ಯಗಳಲ್ಲಿ ಉತ್ತರ : | 1 × 4 = 4 |
| | ವಿಷಯ ಸಂಗ್ರಹಕ್ಕೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4ಅಂಕಗಳು |
| | — ಬಾಲೆ ಬಳೆಗಾರನಿಗೆ ನನ್ನ ತವರೂರಿನಲ್ಲಿ ಬಳೆಗಳಿಲ್ಲ, ಬಳೆಗಳನ್ನು ತೆಗೆದುಕೊಂಡು ಹೋಗಲು ಸೂಚಿಸಿದಾಗ, ಬಳೆಗಾರ ನಾನು ನಿನ್ನ ತವರುಮನೆಯನ್ನು ನೋಡಿಲ್ಲ ತವರುಮನೆಯನ್ನು ತೋರು ಬಾ ಎಂದಾಗ, ಬಾಲೆ ಬಳೆಗಾರನಿಗೆ ತನ್ನ ತವರೂರ ಹಾದಿ ಮತ್ತು ಮನೆಯ ಗುರುತನ್ನು ತಿಳಿಸಿದಾಗ ಬಳೆಗಾರನಿಗೆ ಬಾಲೆಯ ತವರೂರು ಯಾವುದೆಂದು ತಿಳಿಯಿತೆಂದನು. ತಾಯಿ ಹಟ್ಟಿಯಲ್ಲಿ ಮುತ್ತಿನ ಚಪ್ಪರದ ಕೆಳಗೆ ಪಗಡೆಯಾಟವನ್ನು ಆಡುತ್ತಿರುತ್ತಾಳೆ. ನನ್ನ ತಾಯಿಗೆ ಅಚ್ಚ ಕೆಂಪಿನ ಬಳೆ, ಹಸಿರು ಗೀರಿನ ಬಳೆಗಳೆಂದರೆ ಬಲು ಇಷ್ಟ ಆದ್ದರಿಂದ ತವರೂರಿಗೆ ಹೋಗುವಾಗ ಈ ಬಳೆಗಳನ್ನು ಮರೆಯದೇ ತೆಗೆದುಕೊಂಡು ಹೋಗಲು ತಿಳಿಸಿದಳು. ಈ ಎಲ್ಲಾ ವಿಚಾರವನ್ನು ತಿಳಿದ ಬಳೆಗಾರ ನಾನು ನಿನ್ನ ತವರು ಮನೆಗೆ ಹೋಗಿ ಬರುತ್ತೇನೆಂದು ಬಾಲೆಗೆ ಹೇಳಿದನು. | |
| | — ಆಧ್ಯಾತ್ಮ ಮಾರ್ಗದಲ್ಲಿ ನಡೆಯಲು ಧ್ಯಾನವೆಂಬ ಊರುಗೋಲು ಬೇಕು. ಈ ಊರುಗೋಲು ನಮ್ಮ ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳನ್ನು ಗುಣಗಳನ್ನು ಮನಸ್ಸಿನಲ್ಲಿ ಭದ್ರಗೊಳಿಸಿರುತ್ತವೆ. ರಹಸ್ಯವಾದ ಮನಸ್ಸಿನ ಮಾತನ್ನು ಆಲಿಸುವುದಕ್ಕೆ ಧ್ಯಾನವೆಂಬ ಕಿವಿಗಳು ಬೇಕು. ಈ ಧ್ಯಾನವು ನಮ್ಮಲ್ಲಿರುವ ಕೆಟ್ಟ, ಗುಣ ನಡತೆಗಳನ್ನು ಸಂಪೂರ್ಣವಾಗಿ ಸುಟ್ಟು ಭಸ್ಮ ಮಾಡುತ್ತವೆ ಎಂದು ಶಾಂತಾದೇವಿ ಕೆ. ಸಾಬಾದಿಯವರು ಧ್ಯಾನದ ಮಹತ್ವವನ್ನು ತಿಳಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಪ್ರಬಂಧ ಲೇಖನ (ಒಂದಕ್ಕೆ ಮಾತ್ರ) | 1 × 5 = 5 |
| | ಪೀಠಿಕೆ/ಪ್ರಸ್ತಾವನೆ | 1 ಅಂಕ |
| | ವಿಷಯದ ಜೋಡಣೆ | 2 ಅಂಕಗಳು |
| | ಮುಕ್ತಾಯ/ಉಪಸಂಹಾರ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 54. | ಪತ್ರಲೇಖನ : | |
| | ವೈಯಕ್ತಿಕ ಪತ್ರ : | |
| | ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ/ವಿಳಾಸ/ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |